ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.5889/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಆರೋಗ್ಯ ಸ್ವಾಮಿ** | | |
| **ತಂದೆಃಹೆಸರು** | **ಸಂದಿಯಾ** | **ಪಿಡಬ್ಲೂಃ** | **1** |
| **ವಯಸ್ಸು** | **65 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಆರ್ ಹೆಚ್ ಕ್ಯಾಂಪ್.** | | |

**ದಿನಾಂಕ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಮೃತ ಆಂಟೋನಿ ನನ್ನ ಮಗ. ದಿ.14-08-2023 ರಂದು ಸಂ. 6 ಗಂಟೆಯ ಸುಮಾರಿಗೆ ಮೃತ ಆಂಟೋನಿಯು ತನ್ನ ಮೋ.ಸೈ. ಸಂ.ಕೆ ಎ 36 ಇಟಿ-9267 ನ್ನು ತೆಗೆದುಕೊಂಡು ಸಿಂಧನೂರು ಕಡೆಗೆ ಹೋಗಿ ಬರುವುದಾಗಿ ಹೇಳಿದೆನು. ಅದೇ ದಿನ ರಾ.7-40 ಗಂಟೆಗೆ ನಾನು ಮನೆಯಲ್ಲಿದ್ದಾಗ ನನ್ನ ಮಗನಿಗೆ ಅಪಘಾತವಾಗಿದೆ ಎಂದು ನಮ್ಮ ಪರಿಚಯಸ್ಥರಾದ ಚಾಸಾ-3 ರವರು ಫೋನ್ ಮುಖಾಂತರ ತಿಳಿಸಿದಾಗ ನಾನು ಆರ್ ಹೆಚ್ ಕ್ಯಾಂಪಿನ ಕ್ರಾಸ್ ರಸ್ತೆಯಲ್ಲಿ ಅಪಘಾತವಾದ ಸ್ಥಳಕ್ಕೆ ಹೋಗಿ ಗಾಯಗೊಂಡ ನನ್ನ ಮಗನನ್ನು ಸಿಂಧನೂರು ಆದರ್ಶ ಆಸ್ಪತ್ರೆಗೆ ದಾಖಲು ಮಾಡಿಸಿದೆನು, ಆಗ ನನ್ನ ಮಗ ಅಪಘಾತದಲ್ಲಿ ಮೃತಪಟ್ಟಿರುತ್ತಾನೆ. ನಂತರ ಪೋಲೀಸರು 2 ದಾಖಲೆಗಳಿಗೆ ನನ್ನ ಸಹಿ ಪಡೆದು, ಅಪಘಾತಸ್ಥಳದಲ್ಲಿ ನನ್ನನ್ನು ನಿಲ್ಲಿಸಿ ಫೋಟೋ ತೆಗೆದಿದ್ದರು. ನಂತರ ಪೋಲೀಸರು ಪಂಚನಾಮೆ & ನನ್ನ ಮಗನ ಶವ ಪಂಚನಾಮೆ ಮಾಡಿ ಭಾವಚಿತ್ರ ತೆಗೆದಿರುತ್ತಾರೆ.

ದೂರನ್ನು & ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 3 ಎಂದು, ನಿಪಿ-1 & 2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ & 2 ಎ ಎಂದು ಗುರುತಿಸಲಾಯಿತು. ಫೋಟೋಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು. ಅಪಘಾತ

ಯಾರ ತಪ್ಪಿನಿಂದ ಹೇಗೆ ಆಯಿತು ಎಂದು ನನಗೆ ಗೊತ್ತಿಲ್ಲ. ನಿಪಿ-1 & 2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ಶವ ಪಂಚನಾಮೆಯ ಕಾಲಕ್ಕೆ ನನ್ನ ಹೇಳಿಕೆ ಪಡೆದಿದ್ದರು. ಆರೋಪಿತರನ್ನು ನಾನು ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ದಿ.14-08-2022 ರಂದು ನಾನು ಮನೆಯಲ್ಲಿದ್ದಾಗ ರಾ. 7-40 ಕ್ಕೆ ಚಾಸಾ-3 ರವರು ನನಗೆ ಫೋನ್ ಮಾಡಿ ನನ್ನ ಮಗ ನಿಧಾನವಾಗಿ ತನ್ನ ಸಂ.ಕೆ ಎ 36 ಇಟಿ-9267 ರಲ್ಲಿ ಹೋಗುತ್ತಿದ್ದಾಗ ಆರೋಪಿತನು ತನ್ನ ಕಾರ್ ಸಂ. ಕೆ ಎ 36/ ಎನ್ 5489 ನ್ನು ಅತೀವೇಗ & ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಆರ್ ಹೆಚ್ ಕ್ಯಾಂಪ್ ಕ್ರಾಸ್ ಹತ್ತಿರ ನನ್ನ ಮಗನ ವಾಹನಕ್ಕೆ ಅಪಘಾತ ಪಡಿಸಿದ್ದರಿಂದ ಅಪಘಾತವಾಗಿ ನನ್ನ ಮಗನಿಗೆ ಗಾಯಗಳಾಗಿದ್ದವು ಎಂದು ಪ್ರತ್ಯಕ್ಷವಾಗಿ ನೋಡಿದ ಚಾಸಾ-2 ರಿಂದ 4 ರವರು ನನಗೆ ತಿಳಿಸಿದ್ದರು ಎಂದು, ಆರೋಪಿ & ಆರೋಪಿಯ ವಾಹನವನ್ನು ನೋಡಿದ ಬಗ್ಗೆ ನಿಪಿ-1 ರಂತೆ ದೂರು ಕೊಟ್ಟಿದ್ದೆನು ಎಂದರೆ ಸರಿಯಲ್ಲ.

ನಂತರ ದಿ.15-08-2022 ಮ.3-30 ರಿಂದ 4-30 ರವರೆಗೆ ನಾನು ತೋರಿಸಿದಂತೆ ಚಾಸಾ-7 & 8 ರವರ ಸಮಕ್ಷಮ ನಿಪಿ-2 ಪಂಚನಾಮೆ ಮಾಡಿ ನಿಪಿ-4 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

ನಿಪಿ-1 ರಿಂದ 3 ರ ಬಗ್ಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**